# ಕನ್ನಡ ಮಾದರಿ ಗದ್ಯಪಾಠ ಯೋಜನೆ

## ಕನ್ನಡ ಮೌಲ್ವಿ – ಗೊರೂರು ರಾಮಸ್ವಾಮಿ ಅಯ್ಯಂಗಾರ್

ನಾನು ಪ್ರಯಾಣಿಸುತ್ತಿದ್ದ ಬಸ್ಸಿಗೆ ಒಬ್ಬ ಮುಸಲ್ಮಾನ ಹತ್ತಿದ. ವಯಸ್ಸು ಸುಮಾರು 55–58 ಇರಬಹುದು. ಆಜಾನುಬಾಹುವಾಗಿ ಪುಷ್ಟವಾಗಿ ಬೆಳೆದಿದ್ದ. ಎತ್ತರದ ಕೆಂಪನೆಯ ಆಳು. ಮುಖದಲ್ಲಿ ಸಹ ಒಳ್ಳೆಯ ಕಳೆ ಇತ್ತು. ಕಣ್ಣಿನ ದೃಷ್ಟಿ ತೀಕ್ಷ್ಣವಾಗಿತ್ತು. ಗಡ್ಡ ಪೂರ್ಣವಾಗಿ ಬೆಳ್ಳಗಾಗಿ ಶುದ್ಧಿ ಮಾಡಿದ ಹತ್ತಿಯ ತುಪ್ಪಳದಂತೆ ತೋರುತ್ತಿತ್ತು. ವಿಶಾಲವಾದ ಹಣೆ, ಗಂಭೀರವಾದ ಮುಖ, ಮಡಿ ಮಾಡಿ ಇಸ್ತ್ರೀ ಮಾಡಿದ್ದ ಬಿಳಿಯ ಶರಾಯಿ(ಕೋಟು) ಇವುಗಳಿಂದ ಆತನನ್ನು ನೋಡುವವರಿಗೆ ಇವನೊಬ್ಬ ಮರ್ಯಾದಸ್ಥ, ಸದ್ಗೃಹಸ್ಥ ಎಂಬ ಭಾವನೆ ಉಂಟಾಗುತ್ತಿತ್ತು. ಆತನನ್ನು ಯಾರು ನೋಡಿದರೂ ಇನ್ನೂ ಐದು ಘಳಿಗೆ ನಿಂತು ನೋಡೋಣ ಎಂಬಂತೆ ಅವನ ಆಕೃತಿ ಇದ್ದರೂ ನನ್ನನ್ನು ಮತ್ತಷ್ಟು ಹೆಚ್ಚಾಗಿ ಅವನ ಕಡೆಗೆ ಆಕರ್ಷಿಸಿದ್ದು ಆ ಗೃಹಸ್ಥನ ಕೈಲಿದ್ದ ಒಂದು ದೊಡ್ಡ ಪುಸ್ತಕ. ಆ ಪುಸ್ತಕವನ್ನು ನೋಡಿದ ಕೂಡಲೇ ಅದು ಕುಮಾರವ್ಯಾಸ ಭಾರತವಿರಬೇಕೆಂದು ನನಗೆ ಗೊತ್ತಾಯಿತು. ಹದಿನಾರಾಣೆಯ ಮುಸಲ್ಮಾನ ಮೌಲ್ವಿಯಂತೆಯೇ ಕಾಣುತ್ತಿದ್ದ ಇವನ ಕೈಯಲ್ಲಿ್ಲ ಕುಮಾರವ್ಯಾಸ ಭಾರತವೇ? ಅದು ಕುಮಾರವ್ಯಾಸ ಭಾರತವೇ ತಾನೇ ಎಂಬ ಕುತೂಹಲ ನನ್ನಲ್ಲಿ ಪೂರ್ತಿ ಉಂಟಾಗಿತ್ತು. ನಾನು ಬಗ್ಗಿ ಆ ಪುಸ್ತಕವನ್ನು ನೋಡಿದೆ. ಹೌದು ನಿಜವಾಗಿಯೂ ಕುಮಾರವ್ಯಾಸ ಭಾರತವೇ.

ನನ್ನ ಬಾಲ್ಯದಲ್ಲಿ ನಮ್ಮ ಹಳ್ಳಿಯಲ್ಲಿಯೇ ಒಬ್ಬ ಯಕ್ಷಗಾನದಲ್ಲಿ ಕೃಷ್ಣನ ಪಾತ್ರವನ್ನು ಅತ್ಯುತ್ಕೃಷ್ಟವಾಗಿ ಅಭಿನಯಿಸುತ್ತಿದ್ದನು. ರಂಗಸ್ಥಳದಲ್ಲಿ ಬಂದು ನಂತರ ಅವನ ವೇಷವನ್ನು, ವಾಕ್ ಶುದ್ಧಿಯನ್ನು ನೋಡಿ ವೈದಿಕ ಮನೆತನದ ವೃದ್ಧ ಸ್ತ್ರೀಯರೂ ಸಹ ಮೈ ಮರೆತು “ಕೃಷ್ಣ ಪರಮಾತ್ಮ ಕಾಪಾಡಪ್ಪ” ಎಂದು ಕೈ ಮುಗಿದು ಬಿಡುತ್ತಿದ್ದರು. ಆನಂತರ ನಾವು “ಕೃಷ್ಣ ಪರಮಾತ್ಮನೆಲ್ಲಿ ಬಂದ ಇವ ಹೊಸಕೇರಿಯ ಹುಸೇನ್ ಸಾಬಿ” ಎಂದರೂ ಸಹ ಆ ವೃದ್ಧೆಯರು “ಹುಸೇನ್ ಸಾಬಿಯಂತೆ ಹುಸೇನ್ ಸಾಬಿ, ನಾವು ಕೈ ಮುಗಿದಿರುವುದು ತಲುಪುವುದು ಶ್ರೀ ಕೃಷ್ಣನಿಗೆ. ಇವನು ಯಾರಾದರೇನು?” ಎನ್ನುತ್ತಿದ್ದರು. ಕೊನೆಗೆ ಆ ಸಾಹೇಬನಿಗೆ “ಹುಸೇನ್ ಕೃಷ್ಣ” ಎಂದೇ ಹೆಸರಾಗಿತ್ತು. ನಾನು ಸಾಹೇಬರ ಹತ್ತಿರಕ್ಕೆ ಸರಿದು ಪುಸ್ತಕವನ್ನೊಮ್ಮೆ ನೋಡಿದೆ. ಅದು ಉದ್ಯೋಗಪರ್ವದ ಒಂದು ಸಂಧಿ. ನನಗೆ ಇದ್ದಕ್ಕಿದ್ದಂತೆ ಆ ಸಾಹೇಬರಲ್ಲಿ ಏನೋ ಒಂದು ಅನಿರ್ವಚನೀಯವಾದ ಬಾಂಧವ್ಯ ಉಂಟಾಯಿತು. ಅವರು ನನಗೆ ಬಸ್ಸಿನಲ್ಲಿ ಕುಳಿತಿದ್ದ ಎಲ್ಲರಿಗಿಂತ ಹೆಚ್ಚು ಪ್ರಿಯರಾಗಿ ತೋರಿದರು. ಜಾತಿ, ಬಾಷೆ, ಪಾನ್ರ್ತ್ಯಗಳ ಗೊಂದಲದಲ್ಲಿ ನಮ್ಮನ್ನು ಮುಸುಕಿರುವ ಅಂಧಕಾರದಲ್ಲಿ ಒಂದು ಮಿಂಚು ಹೊಳೆದಂತೆ ಆಯಿತು. ಹೇಗಾದರೂ ಮಾಡಿ ಆತನನ್ನು ಮಾತನಾಡಿಸಬೇಕು ಎಂದು ನಾನು “ನಿಮಗೆ ಕನ್ನಡ ಬರುತ್ತದೆಯೇ?” ಎಂದು ಕೇಳಿದೆ. ಆತ “ಹೌದು, ನಾನು ಕನ್ನಡ ಕಲಿತದ್ದು ಮೂರನೇ ತರಗತಿವರೆಗೆ, ಆದರೆ ಅದರಿಂದಲೇ ಮೂವತ್ತು ವರ್ಷ ನಿಭಾಯಿಸಿಬಿಟ್ಟೆ. ನೆನ್ನೆ ನನಗೆ ನಿವೃತ್ತಿ ಆಯಿತು” ಎಂದರು. ನಾನು “ಯಾವ ಕೆಲಸದಿಂದ ನಿವೃತ್ತರಾದಿರಿ” ಎಂದು ಕೇಳಿದೆ. ಆತ “ಪ್ರೈಮರಿ ಶಾಲಾ ಉಪಾಧ್ಯಾಯ ವೃತ್ತಿಯಿಂದ” ಎಂದರು. “ಕನ್ನಡ ಉಪಾಧ್ಯಾಯರಾಗಿಯೋ ಉರ್ದು ಉಪಾಧ್ಯಾಯರಾಗಿಯೋ?” “ಕನ್ನಡ ಉಪಾಧ್ಯಾಯರಾಗಿ”. “ಹಾಗಾದರೆ ನಿಮಗೆ ಉರ್ದು ಬರುವುದಿಲ್ಲವೇ?” ಸಾಹೇಬರು ಶುಭ್ರವಾದ ಗಡ್ಡವನ್ನು ನೀವಿಕೊಳ್ಳುತ್ತ ಹೀಗೆ ಹೇಳಿದರು. “ನಾನು ಕಲಿತಿದ್ದು ಉರ್ದು, ಕಲಿಸಿದ್ದು ಕನ್ನಡ”. ನನಗೆ ಅವರು ತಮ್ಮ ಕತೆಯನ್ನು ಪೂರ್ತಿ ಹೇಳುವುದಕ್ಕೆ ಮುಂಚಿತವಾಗಿ ಎಲ್ಲಿ ಇಳಿದು ಹೋಗಿಬಿಡುವರೋ ಎಂಬ ಕಾತರ. “ಹೇಳಿ, ಹೇಳಿ” ಎಂದು ಆತುರಿಸಿದೆ.

ಸಾಹೇಬರು ಮತ್ತೆ ಪ್ರಾರಂಭಿಸಿದರು. "ಆಗ ನಮ್ಮ ಊರಿನಲ್ಲಿ ಉರ್ದು ಶಾಲೆ ಇರಲಿಲ್ಲ. ನಮ್ಮ ತಂದೆಯವರಿಗೂ ಉರ್ದು ಓದಲೂ ಬರೆಯಲೂ ಬಾರದು. ನಮ್ಮೂರಿನಲ್ಲಿ ನಮ್ಮವರ ಇನ್ನೂ ಅನೇಕ ಸಂಸಾರಗಳಿದ್ದವು. ಆದರೆ ಅವರಾರಿಗೂ ಉರ್ದುವನ್ನು ಓದುವುದಕ್ಕಾಗಲೀ ಬರೆಯುವುದಕ್ಕಾಗಲೀ ಬರುತ್ತಿರಲಿಲ್ಲ. ಆರು ಮೈಲಿ ದೂರದ ಹಳ್ಳಿಯಲ್ಲಿ ಒಂದು ಉರ್ದು ಶಾಲೆ ಇತ್ತು. ಅಲ್ಲಿಯೇ ಉಪಾಧ್ಯಾಯರು ವಾರದಲ್ಲಿ ಎರಡು ದಿನ(ಶನಿವಾರ, ಭಾನುವಾರ) ನಮ್ಮ ಮನೆಗೆ ಬಂದು ನನಗೆ ಉರ್ದು ಪಾಠವನ್ನು ಹೇಳುವಂತೆ ನಮ್ಮ ತಂದೆ ಗೊತ್ತು ಮಾಡಿದ್ದರು. ಆ ಉಪಾಧ್ಯಾಯರು ಬುದ್ಧಿವಂತರು. ನಾನು ಉರ್ದುವನ್ನು ಬೇಗ ಬೇಗ ಕಲಿತೆ" ಎಂದರು. ನಾನು "ಭಾರತದ ಕಥೆ ನಿಮಗೆ ಪೂರ್ತಿ ಒಪ್ಪುತ್ತದೆಯೇ? ನಿಮ್ಮ ಧರ್ಮ ನಂಬಿಕೆಗೆ ವಿರೋಧವಾದುದು ಅದರಲ್ಲಿ ಏನೂ ಇಲ್ಲವೇ?" ಎಂದು ಕೇಳಿದೆ.

ಸಾಹೇಬರು "ಇದು ಧರ್ಮದ ಕಥೆ. ಎಲ್ಲ ಮತಗಳನ್ನೂ ವ್ಯಾಸಂಗ ಮಾಡಬೇಕು. ಎಲ್ಲ ಮತಗಳೂ ಇರಬೇಕು. ಇಲ್ಲದಿದ್ದರೆ ಜಗತ್ತು ರಸಹೀನವಾಗುತ್ತದೆ. ಉದ್ಯಾನದಲ್ಲಿ ನಾನಾ ಬಗೆಯ ಹೂಗಳಿರಬೇಕು. ಒಂದೇ ಬಗೆಯ ಹೂ ಎಲ್ಲೆಲ್ಲಿಯೂ ಇದ್ದರೆ ಸ್ವಾರಸ್ಯವಿಲ್ಲ. ಎಲ್ಲ ಮತಗಳಲ್ಲಿಯೂ ಉದಾತ್ತ ತತ್ತ್ವಗಳಿವೆ. ನಾನು ಮಹಾಭಾರತ, ರಾಮಾಯಣ, ಭಗವದ್ಗೀತೆ, ಕುರಾನ್ ಎಲ್ಲವನ್ನೂ ಓದಿದ್ದೇನೆ. ಎಲ್ಲ ಹೇಳುವುದು ಒಂದೇ. ಮನುಷ್ಯ ಒಳ್ಳೆಯವನಾಗಿರಬೇಕು ಎಂದು" ಎಂದರು. "ನೀವು, ಕನ್ನಡ ಪಾಠ ಚೆನ್ನಾಗಿ ಮಾಡುತ್ತೀರಾ" ಎಂದೆ. ಸಾಹೇಬರು ತೃಪ್ತಿಯಿಂದಲೇ "ನನ್ನ ಸಮಾನ ಪಾಠ ಮಾಡುವವರು ಯಾರೂ ಇಲ್ಲವೆಂದು ಪ್ರಶಸ್ತಿಯನ್ನು ಎಲ್ಲರಿಂದಲೂ ಪಡೆದಿದ್ದೇನೆ. ಪ್ರೈಮರಿ ಶಿಕ್ಷಕರ ಸಮ್ಮೇಳನದಲ್ಲಿ ಒಂದು ಮಾದರಿ ಪಾಠ ಮಾಡಲು ಕೊಟ್ಟರು. ಹುಡುಗರು ಎಷ್ಟು ಆಸಕ್ತಿಯಿಂದ ಕೇಳುತ್ತಿದ್ದರೋ ಉಪಾಧ್ಯಾಯರು ಅಷ್ಟೇ ಆಸಕ್ತಿಯಿಂದ ಕೇಳುತ್ತಿದ್ದರು" ಎಂದು ಹೇಳಿದರು. ನಾನು "ನೀವು ಕನ್ನಡದಲ್ಲಿ ಚೆನ್ನಾಗಿ ಮಾತನಾಡುತ್ತೀರಿ" ಎಂದೆ. ಸಾಹೇಬರು "ಎಲ್ಲಿ ಬೇಕಾದರೂ ಸರಿ ಭಾಷಣ ಮಾಡಲು ಹೆದರುವುದಿಲ್ಲ. ಒಂದು ಲಕ್ಷ ಜನ ಇರಲಿ ಕಣ್ಣು ಮುಚ್ಚಿ ಒಂದು ಗಳಿಗೆ ಗುರು ಧ್ಯಾನ ಮಾಡಿದರೆ ಆಯಿತು. ಎದುರಿಗಿರುವವರೆಲ್ಲ ಮಕ್ಕಳಾಗಿಯೇ ತೋರುತ್ತಾರೆ" ಎಂದರು. ನಾನು "ಕನ್ನಡದಲ್ಲಿ ಹೆಚ್ಚು ಪುಸ್ತಕ ಓದುತ್ತೀರಾ?" ಎಂದು ಕೇಳಿದೆ. ಸಾಹೇಬರ "ಹೌದು ಓದುತ್ತೇನೆ, ನಿತ್ಯ ಮಲಗುವುದಕ್ಕೆ ಮುಂಚೆ ಎರಡು ಗಂಟೆಯಾದರೂ ನಾನು ಓದಲೇ ಬೇಕು. ಓದದೇ ಮಲಗಿದರೆ ನಿದ್ರೆ ಬರುವುದಿಲ್ಲ. ಶ್ರೀ ಡಿ ವಿ ಗುಂಡಪ್ಪನವರ ಉಮರನ ಒಸಗೆ ನನಗೆ ಪೂರ್ತಿ ಬಾಯಿಗೆ ಬರುತ್ತದೆ. ಬಹಳ ಚೆನ್ನಾಗಿ ಬರೆದಿದ್ದಾರೆ" ಎಂದರು. ಸಾಹೇಬರು ಸ್ವಲ್ಪ ಹೊತ್ತು ಮೌನವಾಗಿದ್ದು "ನಿಮ್ಮ ಊರು ಯಾವುದು?" ಎಂದು ಕೇಳಿದರು. ನಾನು "ಹಾಸನದ ಹತ್ತಿರದ ಒಂದು ಹಳ್ಳಿ" ಎಂದೆ. ಸಾಹೇಬರು "ನಾನು ಹಾಸನಕ್ಕೆ ಹೋಗಿದ್ದೇನೆ, ಯಾವ ಹಳ್ಳಿ?" ಎಂದರು. ನಾನು "ಗೊರೂರು" ಎಂದೆ. "ನಾನೂ ಗೊರೂರಿಗೂ ಹೋಗಿದ್ದೇನೆ. ಆ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಇದ್ದಾರಲ್ಲ, ಬಹಳ ಚೆನ್ನಾಗಿ ಕಥೆಗಳನ್ನು ಬರೆಯುತ್ತಾರೆ" ಎಂದರು. ನಾನು "ಗೊರೂರಿಗೆ ಹೋಗಿದ್ದಾಗ ಅವರನ್ನು ಸಂಧಿಸಿದ್ದೀರಾ?" ಎಂದೆ. ಸಾಹೇಬರು "ಇಲ್ಲ ಆ ವೇಳೆಗೆ ನಾನು ಅವರ ಪುಸ್ತಕಗಳನ್ನು ನೋಡಿರಲಿಲ್ಲ. ಈಚೆಗೆ ಓದಿದೆ. ನೋಡಬೇಕಾದ ಮನುಷ್ಯರು" ಎಂದರು. ನಾನು "ಅವರು ನಿಮ್ಮೆದುರಿನಲ್ಲಿ ಈಗ ಬಂದರೆ ಏನು ಮಾಡುತ್ತೀರಿ?" ಎಂದು ಕೇಳಿದೆ. ಸಾಹೇಬರು "ಮಾಡುವುದೇನು? ಅತ್ಯಂತ ಸಂತೋಷದಿಂದ ಆಲಿಂಗನ ಮಾಡಿಕೊಳ್ಳುತ್ತೇನೆ" ಎಂದರು. "ನಾನೇ ಆ ಪ್ರಾಣಿ" ಎಂದೆ.

ಸಾಹೇಬರು ನಿಜವಾಗಿಯೂ ನನ್ನನ್ನು ಆಲಿಂಗಿಸಿಕೊಂಡುಬಿಟ್ಟರು. "ಇವತ್ತೇ ಸುದಿನ, ದೇವರ ದಯೆ ನಾವಿಬ್ಬರೂ ಸೇರಿದೆವು. ಪುನಃ ನಮ್ಮನ್ನು ಸೇರಿಸುವ ಕೃಪೆಯನ್ನು ಆತನು ಮತ್ತಾವ ದಿನ ಮಾಡುತ್ತಾನೆಯೋ?" ಎಂದರು. ನನಗೆ ಆ ಸಾಹೇಬರು ನಾನು ಅನೇಕ ಶತಮಾನಗಳಿಂದ ಜನ್ಮ ಜನ್ಮಗಳಲ್ಲಿ ಮಿತ್ರರಾಗಿದ್ದರು ಎಂಬ

ಭಾವನೆಯುಂಟಾಯಿತು. ಮುಂದಿನ ಬಸ್ ನಿಲ್ದಾಣದಲ್ಲಿ ನನಗೆ ನಮಸ್ಕರಿಸಿ ನನ್ನಿಂದ ಬೀಳ್ಕೊಂಡು ಹೊರಟುಹೋದರು. ನನ್ನ ಜೊತೆ ಪ್ರಯಾಣ ಮಾಡಿ ಬಂದ ಒಂದು ಸುಗಂಧ ಇದ್ದಕ್ಕಿದ್ದಂತೆ ಮರೆಯಾದಂತೆ ಭಾಸವಾಯಿತು.

---------------------------------------------------------------------------------------------------------------

- -----------------------------------------------------------------------------------------------------------

## ಕನ್ನಡ ಪಾಠ ಯೋಜನೆಯ ಮಾದರಿ

**ಅಧ್ಯಾಪಕರ ಹೆಸರು:** xxxxxx **ದಿನಾಂಕ:** xxx **ವಿಷಯ:** ಕನ್ನಡ(ಪ್ರಥಮ ಭಾಷೆ) **ತರಗತಿ:** xxx

**ವಿಭಾಗ:** xxx **ಅವಧಿ:** xxx **ಮಾಧ್ಯಮ:** xxx

---------------------------------------------------------------------------------------------------------------

---------------------------------------------------------------------------------------------------------------

**ವಿಷಯ:** ಗದ್ಯಪಾಠ: **ಕನ್ನಡ ಮೌಲ್ವಿ – ಗೊರೂರು ರಾಮಸ್ವಾಮಿ ಅಯ್ಯಂಗಾರ್**

**ಕಲಿಕಾ ಉದ್ದೇಶಗಳು:** ಬೋಧನೆಯ ನಂತರ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು

- ಶಬ್ದಭಂಡಾರ: ಆಜಾನುಬಾಹು, ತೀಕ್ಷ್ಣ, ಘಳಿಗೆ, ಮೌಲ್ವಿ, ಬಾಂಧವ್ಯ, ಕಾತರ– ಈ ಪದಗಳನ್ನು ಸಕ್ರಿಯವಾಗಿ ಬಳಸುವರು ಸಂಧಿಸು, ನಿಮ್ಮೆದುರು, ಯಾರಾದರೇನು – ಪದಗಳನ್ನು ಬಿಡಿಸಿ ಪದಸ್ವರೂಪವನ್ನು ವಿವರಿಸುವರು.
- ಗ್ರಹಿಕೆ: ಪಾಠವನ್ನು ಓದುವ ಮೊದಲಿಗೆ/ಓದುವಾಗ/ ಮತ್ತು ಓದಿದ ನಂತರದ ಹಂತಗಳಲ್ಲಿ ಪಾಠಾಂಶವನ್ನು ಗ್ರಹಿಸಿ, ವಿವಿಧ ಹಂತದ ಗ್ರಹಿಕೆಗಳನ್ನು ಹೋಲಿಸುವರು.
- ಕೌಶಲಗಳು: ಕೇಳುವ, ಓದುವ(ಗಟ್ಟಿಯಾಗಿ ಮತ್ತು ಮೌನವಾಗಿ), ಮೌಖಿಕವಾಗಿ ಮತ್ತು ಲಿಖಿತವಾಗಿ (ಗದ್ಯದಲ್ಲಿ ಬರುವ ವಿಶೇಷ ಅಭಿವ್ಯಕ್ತಿಗಳೊಂದಿಗೆ)ಅಭಿವ್ಯಕ್ತಿಸುವ ಕೌಶಲಗಳನ್ನು ಉತ್ತಮಪಡಿಸಿಕೊಳ್ಳುವರು.
- ಮನೋಭಾವ: ಲೇಖಕರ ವಿವರಣಾ ಶೈಲಿಯನ್ನು, ಕನ್ನಡದ ಸೊಗಸನ್ನು ಮೆಚ್ಚುವ ಮನೋಭಾವವನ್ನು ಬೆಳೆಸಿಕೊಳ್ಳುವರು.
- ಗದ್ಯ ಭಾಗದಲ್ಲಿ ಕಂಡುಬರುವ ವಿಶೇಷ ಅಭಿವ್ಯಕ್ತಿಗಳನ್ನು – ಹತ್ತಿಯ ತುಪ್ಪಳದಂತೆ ಗಡ್ಡ, ಹದಿನಾರಾಣೆಯ ಮುಸಲ್ಮಾನ, ಅಂಧಕಾರದಲ್ಲಿ ಮಿಂಚು ಹೊಳೆದಂತೆ, ಉದ್ಯಾನದಲ್ಲಿ ನಾನಾ ಬಗೆಯ ಹೂಗಳಿರಬೇಕು. ಒಂದೇ ಬಗೆಯ ಹೂ ಎಲ್ಲೆಲ್ಲಿಯೂ ಇದ್ದರೆ ಸ್ವಾರಸ್ಯವಿಲ್ಲ. ನಾನೇ ಆ ಪ್ರಾಣಿ, ‘ಒಂದ’ ಸ’ಗ’ದ ’ಇದ್ದಕ್ಕಿದ್ದಂತ ’ವ’ಹ’ತಾದ’ತ–ಅರ್ಥೈಸಿಕೊಂಡು ಮೆಚ್ಚಿಕೊಳ್ಳುವರು.

**ಬೋಧನಾ ಕಲಿಕಾ ಸಂಪನ್ಮೂಲಗಳು:**

- ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರನ್ನು ಕುರಿತ ವೀಡಿಯೋ ಚಿತ್ರ
- ಕಲಿಕೆಯ ಶಬ್ದಗಳನ್ನು ವಾಕ್ಯಗಳಲ್ಲಿ ಅವುಗಳನ್ನು ಬಳಸಿದ ಪ್ರಯೋಗಗಳ ಸುರುಳಿ ಕರಿಹಲಗೆ
- ಗದ್ಯವನ್ನು ನಾಟಕ(ಸಂಭಾಷಣಾ) ರೂಪದಲ್ಲಿ ರೂಪಾಂತರಿಸಿದ ಪ್ರತಿಗಳು(ವಿದ್ಯಾರ್ಥಿಗಳಿಗೆ ನೀಡಲು)
- ಹೊಸದಾಗಿ ಕಲಿತ ಪದಗಳನ್ನು ಮತ್ತು ವಿಶೇಷ ಅಭಿವ್ಯಕ್ತಿಗಳನ್ನು ಹೊಸ ಸನ್ನಿವೇಶಗಳಲ್ಲಿ ಬಳಸಲು ಅನುವು ಮಾಡಿಕೊಡುವ ಚಿತ್ರಗಳು

**ವಿಧಾನ ಮತ್ತು ಉಪಕ್ರಮಗಳು:** ಮಾದರಿ ಓದು, ವಿದ್ಯಾರ್ಥಿಗಳ ಗಟ್ಟಿ ಓದು, ಮೌನ ಓದು, ಗ್ರಹಿಕೆಯನ್ನು ಗ್ರಹಿಸಲು ಪೋಷಿಸಲು ಪ್ರಶ್ನೆಗಳು, ಚಟುವಟಿಕೆಗಳು, ವಿವರಣೆ, ದೃಷ್ಟಾಂತ, ಸ್ವಾನುಭವಗಳ ವಿವರಣೆ,

| ಬೋಧನಾ ಹಂತಗಳು | ಬೋಧನಾ ಹಂತಗಳ ವಿವರ | ಬೋಧನಾ ಕಲಿಕಾ ಚಟುವಟಿಕೆಗಳು | ಕಲಿಕಾ ಪ್ರಕ್ರಿಯೆಯ ನಿರ್ದಿಷ್ಟಗಳು |
|---|---|---|---|
| ಹಂತ I | **ಪೂರಕ ವಾತಾವರಣ ಸೃಷ್ಟಿ/ ಪೂರ್ವಜ್ಞಾನದ ಪ್ರಚೋದನೆ.** | ಅಧ್ಯಾಪಕರು ವಿದ್ಯಾರ್ಥಿಗಳಿಗೆ ಅಮೆರಿಕದಲ್ಲಿ ಗೊರೂರು' ಎಂಬ ವೀಡಿಯೋ ಚಿತ್ರವನ್ನು ತೋರಿಸುವರು. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಬಗ್ಗೆ ವಿದ್ಯಾರ್ಥಿಗಳಿಗೆ ಏನೆಲ್ಲಾ ತಿಳಿದಿದೆ ಎಂಬುದನ್ನು ಹೇಳಲು ಪ್ರೋತ್ಸಾಹಿಸುವರು, ಉತ್ತರಗಳನ್ನು ಅಭಿನಂದಿಸುವರು, ಗೊರೂರರ ಪ್ರವಾಸ ಕಥನದ ಕಡೆಯಿಂದ ಅವರ ಕೃತಿಗಳ ಬಗೆಗೆ ವಿದ್ಯಾರ್ಥಿಗಳ ಗಮನ ಸೆಳೆಯುವರು. ಕೃತಿಗಳನ್ನು ಪಟ್ಟಿಮಾಡಿದ ಸುರುಳಿ ಕರಿಹಲಗೆಯನ್ನು ಬಿಡಿಸಿ ತೋರಿಸುವರು. ವಿದ್ಯಾರ್ಥಿಗಳು ಅವರ ಕೃತಿಗಳ ಕುರಿತು ಹೆಚ್ಚು ತಿಳಿಯ ಬಯಸುವಂತೆ ಪ್ರಚೋದಿಸುವರು. | ಚಿತ್ರವನ್ನು ಗಮನಿಸುವರು. ಗೊರೂರರ ಕುರಿತು ತಮಗೆ ಈಗಾಗಲೇ ತಿಳಿದಿರುವ ಅಂಶಗಳನ್ನು ಮತ್ತು ವೀಡಿಯೋ ಮೂಲಕ ತಿಳಿದುಕೊಂಡ ಅಂಶಗಳನ್ನು ತಿಳಿಸುವರು. |

| | | | |
|---|---|---|---|
| ಹಂತ 2 | **ಕಲಿಕಾ ವಿಷಯಗಳ ಪ್ರಸ್ತುತಿ ಮತ್ತು ಪರಿಚಯ** | ಇಂದಿನ ಕಲಿಕೆಯನ್ನು ಕುರಿತಂತೆ ಕೆಳಕಂಡಂತೆ ಪ್ರಸ್ತುತಪಡಿಸಿ ಪರಿಚಯಿಸುವರು<br>ಉದ್ದೇಶ ನಿರೂಪಣೆ; ಇಂದು ನಾವು ಈ ಗೊರೂರರ ಒಂದು ಅತ್ಯುತ್ತಮ ಕಥೆ 'ಕನ್ನಡ ಮೌಲ್ವಿ' ಎಂಬ ಗದ್ಯಭಾಗವನ್ನು ಆನಂದಿಸೋಣ. ಇದನ್ನು ಅವರ 'ಕನ್ಯಾಕುಮಾರಿ ಮತ್ತು ಇತರ ಕಥೆಗಳು' ಎಂಬ ಕೃತಿಯಿಂದ ಆಯ್ಕೆ ಮಾಡಿಕೊಳ್ಳಲಾಗಿದೆ. | ಕಲಿಯುವ ಅಂಶಗಳನ್ನು ಪುಸ್ತಕಗಳಲ್ಲಿ ಗುರುತಿಸಿಕೊಳ್ಳುವರು |

| | | | |
|---|---|---|---|
| ಹಂತ 3 | **ಕಲಿಕಾಂಶಗಳ ಸ್ಪಷ್ಟೀಕರಣ** | • ಅಧ್ಯಾಪಕರು ಪಠ್ಯದ ಶೀರ್ಷಿಕೆಗೆ ಸಂಬಂಧಿಸಿದಂತೆ ಕೊಟ್ಟಿರುವ ಚಿತ್ರವನ್ನು ಗಮನಿಸಲು ಹೇಳಿ, ಪಾಠದ ಶೀರ್ಷಿಕೆ ಮತ್ತು ಈ ಚಿತ್ರದ ಆಧಾರದ ಮೇಲೆ ಗದ್ಯಭಾಗದ ಉದ್ದೇಶ ಏನಿರಬಹುದು ಎಂಬುದನ್ನು ಪ್ರಶ್ನಿಸಿ, ವಿದ್ಯಾರ್ಥಿಗಳ ನೋಟ್ ಪುಸ್ತಕದಲ್ಲಿ ಅವರ ಆ ಊಹೆಯನ್ನು ಗುರುತಿಸಿಕೊಳ್ಳಲು ಹೇಳುವರು.<br>• ವಿದ್ಯಾರ್ಥಿಗಳಿಗೆ ಪಾಠಭಾಗವನ್ನು ಮೌನವಾಗಿ ಓದಲು ಹೇಳಿ ಅಗತ್ಯವಿರುವಷ್ಟು ಸಮಯ ನೀಡುವರು.<br>• ವಿದ್ಯಾರ್ಥಿಗಳು ಓದಿದ ನಂತರ ಅಧ್ಯಾಪಕರು ಗಟ್ಟಿಯಾಗಿ ಓದುವರು<br>• ವಿದ್ಯಾರ್ಥಿಗಳಿಂದ ಗಟ್ಟಿಯಾಗಿ ಓದಿಸುವರು<br>• ಓದಿಸಿದ ಭಾಗಕ್ಕೆ ಸಂಬಂಧಿಸಿದಂತೆ ಇಡೀ ಗದ್ಯಭಾಗವನ್ನು ಕೆಳಗಿನಂತೆ ಎರಡು ಅಥವಾ ಮೂರು ಹಂತಗಳಾಗಿ ವಿಂಗಡಿಸಿಕೊಂಡು ಗ್ರಹಿಕೆಯ ಪ್ರಶ್ನೆಗಳನ್ನು ಕೇಳುವರು(ವಿವಿಧ ಹಂತಗಳಲ್ಲಿ).<br>1.ನಾನು ಪ್ರಯಾಣಿಸುತ್ತಿದ್ದ ಬಸ್ಸಿಗೆ... ಎಂದು ಕೇಳಿದೆ.<br>ಗ್ರಹಿಕೆಯ ಪ್ರಶ್ನೆಗಳು:<br>• ಲೇಖಕರು ಈ ಕಥೆಯಲ್ಲಿ ವಿವರಿಸಿರುವ ಸನ್ನಿವೇಶ ಯಾವುದು?<br>• ಬಸ್ಸಿನಲ್ಲಿ ಅವರನ್ನು ಆಕರ್ಷಿಸಿದ ವಿಷಯ ಯಾವುದು? ಅದನ್ನು ಗೊರೂರರು ಹೇಗೆ ವರ್ಣಿಸಿದ್ದಾರೆ?<br><br>2.ಸಾಹೇಬರು, ಇದು ಧರ್ಮದ ಕಥೆ...ಭಾಸವಾಯಿತು.<br>• ಲೇಖಕರು ಮತ್ತು ಮೌಲ್ವಿ–ಇವರ ನಡುವೆ ನಡೆದ ಸಂಭಾಷಣೆ ಏನು?<br>• ಈ ಸಂಭಾಷಣೆಯ ಮುಕ್ತಾಯವನ್ನೂ ಕತೆಯ ಅಂತ್ಯವನ್ನೂ ಲೇಖಕರು ಮಾಡಿರುವ ಬಗೆ ಹೇಗೆ?<br><br>ಮಕ್ಕಳು ಉತ್ತರಿಸಿದಾಗ, ಆಯಾಯಾ ಸಂದರ್ಭದಲ್ಲಿ, ಕಲಿಕೆಯ ಹೊಸ ಶಬ್ದ(ಪದ)ಗಳನ್ನು, ವಿಶೇಷ ಭಾಷಾಂಶಗಳನ್ನು ಪರಿಚಯಿಸುವರು.<br>(ಆಜಾನುಬಾಹು, ತೀಕ್ಷ, ಘಳಿಗೆ, ಮೌಲ್ವಿ, ಬಾಂಧವ್ಯ, ಕಾತರ)<br>ಆಜಾನುಬಾಹು:<br>ತೀಕ್ಷ್ಣ:<br>ಘಳಿಗೆ: ಸಂಸ್ಕೃತದ 'ಘಟಿಕಾ' ಎಂಬ ಪದದ ತದ್ಭವ ರೂಪ, ಕಾಲದ ಮಾನ.<br>ಬಾಂಧವ್ಯ: ಬಂಧುವಿನ ಭಾವ, ಬಂಧುವಿನಂತೆ, | ಚಿತ್ರವನ್ನು ಗಮನಿಸಿ, ಊಹಿಸಿ, ಪುಸ್ತಕದಲ್ಲಿ ಗುರುತಿಸಿಕೊಳ್ಳುವರು.<br>ಮೌನವಾಗಿ ಓದುವರು.<br><br>ಗಟ್ಟಿಯಾಗಿ ಓದುವರು<br><br>ಪ್ರಶ್ನೆಗಳಿಗೆ ಉತ್ತರಿಸುವರು.<br><br>ಪದಗಳ, ವಿಶೇಷ ಅಭಿವ್ಯಕ್ತಿಗಳ ಅರ್ಥ ಮತ್ತು ವಿವರಗಳನ್ನು ಪುಸ್ತಕದಲ್ಲಿ ಗುರುತಿಸಿಕೊಳ್ಳುವರು. |

| | | | |
|---|---|---|---|
| | | ಕಾತರ:<br>• ಪದಗಳನ್ನು ಪರಿಚಯಿಸುತ್ತಲೇ ಅವುಗಳನ್ನು ಸಕ್ರಿಯಗೊಳಿಸಲು ವಿದ್ಯಾರ್ಥಿಗಳು ಹೊಸ ಸನ್ನಿವೇಶಗಳಲ್ಲಿ ಅವುಗಳನ್ನು ಬಳಸಿ ಸನ್ನಿವೇಶ/ವಾಕ್ಯಗಳನ್ನು ರಚಿಸಲು ಹೇಳುವರು.<br>ಗ್ರಹಿಕೆಯನ್ನು ಖಚಿತಪಡಿಸಿಕೊಳ್ಳುವ ಈ ಸಂದರ್ಭದಲ್ಲಿಯೇ ಲೇಖಕರ ವಿಶೇಷ ಅಭಿವ್ಯಕ್ತಿಗಳನ್ನೂ ಪರಿಚಯಿಸುವರು<br>✓ (ಹತ್ತಿಯ ತುಪ್ಪಳದಂತೆ ಗಡ್ಡ–ಅತ್ಯಂತ ನವಿರಾದ, ಬಿಳಿಯ ಬಣ್ಣದ,<br>✓ ಹದಿನಾರಾಣೆಯ ಮುಸಲ್ಮಾನ–ಅಪ್ಪಟ ಮುಸಲ್ಮಾನ(ಎಲ್ಲ ರೀತಿಯ್ಲೂ ಮುಸಲ್ಮಾನನಂತೆಯೇ ಕಾಣುವವ. ಅಂಧಕಾರದಲ್ಲಿ ಮಿಂಚು ಹೊಳೆದಂತೆ–ಕೆಟ್ಟದರ ನಡುವೆ ಒಳ್ಳೆಯದು ಕಂಡಂತೆ,<br>✓ ಉದ್ಯಾನದಲ್ಲಿ ನಾನಾ ಬಗೆಯ ಹೂಗಳಿರಬೇಕು. ಒಂದೇ ಬಗೆಯ ಹೂ ಎಲ್ಲೆಲ್ಲಿಯೂ ಇದ್ದರೆ ಸ್ವಾರಸ್ಯವಿಲ್ಲ–ವೈವಿಧ್ಯತೆಯನ್ನು ಒಪ್ಪಿಕೊಳ್ಳಬೇಕು.<br>✓ ನಾನೇ ಆ ಪ್ರಾಣಿ: 'ನಾನೇ ಅವನು' ಒಂದು ಹೇಳುವ ಒಂದು ರೀತಿ(ಅತಿ ಸಾಮಾನ್ಯನಾದವ ಎಂಬ ಭಾವ)<br>✓ ಒಂದು ಸುಗಂಧ ಇದ್ದಕ್ಕಿದ್ದಂತೆ ಮರೆಯಾದಂತೆ: ಇಷ್ಟವಾದುದೇನೋ ಪಕ್ಕನೆ ಮಾಯವಾದಂತೆ<br>• ಪ್ರತಿ ಪದವನ್ನು ಹೊಸ ಸನ್ನಿವೇಶದಲ್ಲಿ ಬಳಸುವ ಸಂದರ್ಭಗಳಲ್ಲಿ ವಿದ್ಯಾರ್ಥಿಗಳಿಗೆ ಸನ್ನಿವೇಶ/ವಾಕ್ಯಗಳನ್ನು ರಚಿಸಲು ಅನುಕೂಲವಾಗುವಂತೆ ಸೂಕ್ತ ಸನ್ನಿವೇಶಗಳ ಚಿತ್ರಗಳನ್ನು ತೋರಿಸುವರು. | ವಾಕ್ಯ/ಸನ್ನಿವೇಶಗಳನ್ನು ರಚಿಸುವರು. |

| | | | |
|---|---|---|---|
| ಹಂತ 4 | **ಕಲಿಕಾಂಶಗಳ ಪುಷ್ಟೀಕರಣ/ ಅಭ್ಯಾಸ** | ಇಡೀ ಪಾಠಭಾಗದ ಅರ್ಧಭಾಗವನ್ನು ಅಧ್ಯಾಪಕ/ಅಧ್ಯಾಪಕಿಯೇ ನಾಟಕರೂಪಕ್ಕೆ ಪರಿವರ್ತಿಸಿದ್ದು, ವಿದ್ಯಾರ್ಥಿಗಳನ್ನು ಎರಡು ಭಾಗಮಾಡಿ ಪ್ರತಿಯೊಂದು ಗುಂಪೂ ಎರಡೂ ಪಾತ್ರಗಳನ್ನು ಹಂಚಿಕೊಂಡು ಓದಲು ಹೇಳುವರು.<br>ಗದ್ಯವನ್ನು ನಾಟಕವಾಗಿ ಸಂಭಾಷಣಾ ರೂಪದಲ್ಲಿ ಪರಿವರ್ತಿಸುವುದು ಹೇಗೆ ಎಂಬುದನ್ನು ಹೇಳಿಕೊಟ್ಟು ವಿದ್ಯಾರ್ಥಿಗಳಿಗೆ ಉಳಿದ ಅರ್ಧಭಾಗವನ್ನು ಗುಂಪಿನಲ್ಲೇ ನಾಟಕವಾಗಿ ಪರಿವರ್ತಿಸಲು ಹೇಳುವರು.<br>ಉನ್ನತ ಮಟ್ಟದ ಗ್ರಹಿಕೆಯನ್ನು ಪರೀಕ್ಷಿಸುವರು:<br>• ಈ ಕತೆಯಿಂದ ಲೇಖಕರ ವ್ಯಕ್ತಿತ್ವವನ್ನು ಕುರಿತಂತೆ ಕಂಡುಬರುವ ಗುಣಗಳಾವುವು?<br>• ಮೌಲ್ವಿಯವರ ಯಾವ ಗುಣಗಳು ನಿಮಗೆ ಇಷ್ಟವಾಗುತ್ತವೆ?<br>ಪಾಠಭಾಗವು ಕೆಳಗಿನ ಯಾವ ಮಾತುಗಳನ್ನು ಪೋಷಿಸುತ್ತವೆ ಮತ್ತು ಆ ವಾಕ್ಯಗಳಾವುವು?<br>• ಮೌಲ್ವಿಯವರಿಗೆ ಪುಸ್ತಕಗಳನ್ನು ಓದುವುದೆಂದರೆ ಬಹಳ ಇಷ್ಟ.<br>• ಲೇಖಕರಿಗೆ ಮೌಲ್ವಿಯವರನ್ನು ತುಂಬಾ ಮೆಚ್ಚಿಕೊಂಡರು.<br>• ಲೇಖಕರಿಗೆ ಅನವಶ್ಯಕವಾಗಿ ತಮ್ಮನ್ನು ಹೊಗಳಿಕೊಳ್ಳುವ ಚಟವಿರಲಿಲ್ಲ. | ಹೆಚ್ಚಿನ ವಿವರಣೆಗಳನ್ನು ಗ್ರಹಿಸುವರು, ವೀಡಿಯೋ ಗಮನಿಸುವರು ಮತ್ತು ಚರ್ಚೆಯಲ್ಲಿ ಭಾಗವಹಿಸಿ ಕ್ರಿಯಾಶೀಲವಾಗಿ ಅಭಿಪ್ರಾಯಗಳನ್ನು ಹಂಚಿಕೊಳ್ಳುವರು. |
| ಹಂತ 5 | **ಕಲಿಕಾಂಶಗಳ ಸಾರಸಂಗ್ರಹ/ ಕಲಿಕೆಯನ್ನು ಖಚಿತಪಡಿಸಿ ಕೊಳ್ಳುವಿಕೆ** | ವಿದ್ಯಾರ್ಥಿಗಳು ಕಲಿತ ಅಂಶಗಳನ್ನು ಸಂಗ್ರಹಿಸಿ ಹೇಳಲು ಹೇಳುವರು. ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳ ಕಲಿಕೆಯನ್ನು ಅಧ್ಯಾಪಕರು ಖಚಿತಪಡಿಸಿಕೊಳ್ಳುವರು. ಸಂದೇಹಗಳಿದ್ದರೆ ಪರಿಹರಿಸುವರು. ಪಾಠದ ಮೊದಲು ವಿದ್ಯಾರ್ಥಿಗಳು ಊಹಿಸಿದ ಪಾಠವಿಷಯಕ್ಕೂ ಪಾಠದಲ್ಲಿ ಹೇಳಿರುವ ವಿಷಯಕ್ಕೂ ಇರುವ ವ್ಯತ್ಯಾಸ ಮತ್ತು ಹೋಲಿಕೆಗಳನ್ನು ಕುರಿತು ಹೇಳಲು ಹೇಳುವರು.<br>ಚಟುವಟಿಕೆ: ಆಜಾನುಬಾಹು, ತೀಕ್ಷ್ಣ, ಹತ್ತಿಯ ತುಪ್ಪಳದಂತೆ ಗಡ್ಡ, ಹದಿನಾರಾಣೆಯ ಮುಸಲ್ಮಾನ, ಅಂಧಕಾರದಲ್ಲಿ ಮಿಂಚು ಹೊಳೆದಂತೆ, ಉದ್ಯಾನದಲ್ಲಿ ನಾನಾ ಬಗೆಯ ಹೂಗಳಿರಬೇಕು. ಒಂದೇ ಬಗೆಯ ಹೂ ಎಲ್ಲೆಲ್ಲಿಯೂ ಇದ್ದರೆ ಸ್ವಾರಸ್ಯವಿಲ್ಲ. ನಾನೇ ಆ ಪ್ರಾಣಿ, ‘ಒಂದ’ ಸ’ಗ’ದ ‘ಇದ್ದಕ್ಕಿದ್ದಂತ ’ವ’ಹ’ತಾದುತೆ – ಈ ಪದಗಳು ಮತ್ತು ಮಾತುಗಳನ್ನು ಬಳಸಿ, ಸನಿವೇಶ/ವಾಕ್ಯ ರಚಿಸಿ ವಿದ್ಯಾರ್ಥಿಗಳು ಬರೆದು ಓದಲು ಸೂಚಿಸುವರು. | ಚಟುವಟಿಕೆಗಳಲ್ಲಿ ಭಾಗವಹಿಸುವರು ಮತ್ತು ಸಂದೇಹಗಳಿದ್ದರೆ ಪರಿಹರಿಸಿಕೊಳ್ಳುವರು. |
| ಹಂತ 6 | **ಅನುಸರಣಾ ಚಟುವಟಿಕೆ** | ಕೆಳಗಿನ ಅನುಸರಣಾ ಚಟುವಟಿಕೆಯನ್ನು ನೀಡುವರು: ವಿದ್ಯಾರ್ಥಿಗಳು ತುಂಬಾ ಮೆಚ್ಚಿಕೊಂಡ ಒಂದು ಸನ್ನಿವೇಶವನ್ನು ಚಿತ್ರಗಳಿದ್ದರೆ ಅದರೊಡನೆ ವಿವರಿಸಿ ಬರೆದು ತರಲು ಹೇಳುವರು ಮತ್ತು ಮುಂದಿನ ತರಗತಿಯಲ್ಲಿ ಆ ಬರೆವಣಿಗೆಯನ್ನು ಪ್ರದರ್ಶಿಸುವರು. | ಗುರುತಿಸಿಕೊಳ್ಳುವರು. |

# ಘಟಕ ಪರೀಕ್ಷೆ:

ನೀವು ಬೋಧಿಸಿದ ಪಾಠವನ್ನು ಆಧರಿಸಿ ಒಂದುಘಟಕ ಪರೀಕ್ಷೆಯನ್ನು ತಯಾರಿಸಿ, ಮಕ್ಕಳಿಗೆ ಅದರ ಆಧಾರದ ಮೇಲೆ ಘಟಕ ಪರೀಕ್ಷೆ ನಡೆಸಿ, ಅಂಕಗಳ ವಿಶ್ಲೇಷಣೆ ಮಾಡಿ. ಫಲಿತಾಂಶಗಳಿಗೆ ಸೂಕ್ತ ಕಾರಣಗಳನ್ನು ಗುರುತಿಸಿ. ಘಟಕ ಪರೀಕ್ಷೆಯನ್ನು ಒಟ್ಟು 50 ಅಂಕಗಳಿಗೆ ಯೋಜಿಸಿ.

**ಘಟಕ ಪರೀಕ್ಷೆಗೆ ಕೆಳಗಿನಂತೆ ನೀಲಿ ನಕಾಶೆ ತಯಾರಿಸಿಕೊಳ್ಳಿ**

**ಪ್ರಶ್ನೆಗಳ ಮಾದರಿಗನುಗುಣವಾದ ಪ್ರಾಮುಖ್ಯತೆ**

ವಸ್ತುನಿಷ್ಠ ಮಾದರಿ ಪ್ರಶ್ನೆಗಳು–20 ಅಂಕಗಳು–40%

ಸಣ್ಣಉತ್ತರದ ಪ್ರಶ್ನೆಗಳು–10 ಅಂಕಗಳು–20%

ದೊಡ್ಡಉತ್ತರದ /ಸಂಕ್ಷಿಪ್ತ ಪ್ರಬಂಧ ಮಾದರಿ ಪ್ರಶ್ನೆಗಳು–20 ಅಂಕಗಳು–40%

––––––––––––––––––––––––––––––––––––––––––––

**ಉದ್ದೇಶಗಳಿಗನುಗುಣವಾದ ಪ್ರಾಮುಖ್ಯತೆ**

ಸಾಮಾನ್ಯ ಗ್ರಹಿಕೆ– 10 ಅಂಕಗಳು – 20%

ಉನ್ನತ ಮಟ್ಟದ ಗ್ರಹಿಕೆ –10 ಅಂಕಗಳು–20%

ಬರೆವಣಿಗೆಯ ಕೌಶಲ –10 ಅಂಕಗಳು–20%

ಪದಗಳ ಪರಿಚಯ–5 ಅಂಕಗಳು–10%

ವಾಕ್ಯರಚನಾ ಸಾಮರ್ಥ್ಯ–5 ಅಂಕಗಳು ವಸ್ತುನಿಷ್ಠ ಮಾದರಿ ಪ್ರಶ್ನೆಗಳು–10%

ಭಾಷಾ ವಿಷಯಕ ಜ್ಞಾನ–10 ಅಂಕಗಳು–20%

––––––––––––––––––––––––––––––––

ಕೆಳಗಿನಂತೆ ನೀಲಿ ನಕಾಶೆ ತಯಾರಿಸಿಕೊಳ್ಳಿ.

ಸೂಚನೆ: ಆವರಣದ ಹೊರಗಿರುವ ಸಂಖ್ಯೆಗಳು ಪ್ರಶ್ನೆಪತ್ರಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆಯನ್ನೂ ಆವರಣದ ಒಳಗಿನ ಸಂಖ್ಯೆಗಳು ಪ್ರಶ್ನೆಗಳಿಗೆ ನಿಗದಿಪಡಿಸಲಾದ ಅಂಕಗಳನ್ನೂ ಸೂಚಿಸುತ್ತವೆ.

| | **ಪ್ರಶ್ನೆಯ ವಿಧಗಳು** → | **ಸಂಕ್ಷಿಪ್ತ ಪ್ರಬಂಧ ಮಾದರಿ ಪ್ರಶ್ನೆಗಳು** | **ಸಣ್ಣಉತ್ತರದ ಪ್ರಶ್ನೆಗಳು** | **ವಸ್ತುನಿಷ್ಠ ಮಾದರಿ ಪ್ರಶ್ನೆಗಳು** | **ಒಟ್ಟು ಅಂಕಗಳು** |
|---|---|---|---|---|---|
| | ಉದ್ದೇಶಗಳು ↓ | | | | |
| 1 | ಸಾಮಾನ್ಯ ಗ್ರಹಿಕೆ | | 1(2),2(2),3(2),4(2),5(2) | | 10 |
| 2 | ಉನ್ನತ ಮಟ್ಟದಗ್ರಹಿಕೆ | 6(5), 7(5) | | | 10 |
| 3 | ಬರೆವಣಿಗೆಯ ಕೌಶಲ | 23(5), 24(5) | | | 10 |
| 4 | ಪದಗಳ ಪರಿಚಯ | | | 8(1),9(1),10(1),11(1),12(1) | 05 |
| 5 | ವಾಕ್ಯರಚನಾ ಸಾಮರ್ಥ್ಯ | | | 25(1), 26(1), 27(1), 28(1), 29(1), | 05 |
| 6 | ಭಾಷಾ ವಿಷಯಕ ಜ್ಞಾನ | | | 13(1),14(1),15(1),16(1),17(,1) 18(1), 19(1), 20(1), 21(1),22(1) | 10 |
| | ಒಟ್ಟು ಅಂಕಗಳು | 20 | 10 | 20 | 50 |

# ಪ್ರಶ್ನೆಪತ್ರಿಕೆ

ಕೆಳಗಿನ ಪ್ರಶ್ನೆಗಳಿಗೆ 2 ಅಥವಾ 3 ವಾಕ್ಯಗಳಲ್ಲಿ ಉತ್ತರಿಸಿ10 ಅಂಕಗಳು

1. ಲೇಖಕರು ಬಸ್ಸಿನಲ್ಲಿ ಭೇಟಿಮಾಡಿದ ವ್ಯಕ್ತಿಯನ್ನು ಹೇಗೆ ವರ್ಣಿಸಿದ್ದಾರೆ?

2. ಬಾಲ್ಯದಲ್ಲಿನ ಯಕ್ಷಗಾನದ ಅನುಭವವನ್ನು ಕುರಿತು ಲೇಖಕರು ನೆನಪಿಸಿಕೊಂಡುದೇನು?

3. ಸಾಹೇಬರು ಅವರ ಭಾಷಾ ಕಲಿಕೆಯ ಬಗ್ಗೆ ಲೇಖಕರ ಬಳಿ ಹೇಳಿಕೊಂಡುದೇನು?

4. ಸಾಹೇಬರ ಓದುವ ಅಭ್ಯಾಸದ ಕುರಿತು ನಮಗೆ ಏನು ತಿಳಿಯುತ್ತದೆ?

5. ಬಹಳ ಚೆನ್ನಾಗಿ ಕಥೆಗಳನ್ನು ಬರೆಯುತ್ತಾರೆ' ಎಂಬ ಮಾತನ್ನು ಹೇಳಿದವರು ಯಾರು? ಕಥೆಗಳನ್ನು ಚೆನ್ನಾಗಿ ಬರೆಯುವವರು ಯಾರು?

ಕೆಳಗಿನ ಪ್ರಶ್ನೆಗಳಿಗೆ 5ಅಥವಾ 6 ವಾಕ್ಯಗಳಲ್ಲಿ ಉತ್ತರಿಸಿ10 ಅಂಕಗಳು

6. ಲೇಖಕರಿಗೆ ಸಾಹೇಬರಲ್ಲಿ ಕುತೂಹಲ ಮೂಡಿಸಿದ ಅಂಶಗಳಾವುವು? ಅವುಗಳಿಗೆ ಕಾರಣವೇನು?

7. ಈ ಗದ್ಯಭಾಗದಿಂದ ಲೇಖಕರು ಮತ್ತು ಸಾಹೇಬರ ಯಾವ ಗುಣಗಳು ನಮಗೆ ಪರಿಚಯವಾಗುತ್ತವೆ?

ಕೆಳಗೆ ಕೆಲವು ಅಪೂರ್ಣ ವಾಕ್ಯಗಳನ್ನು ಕೊಡಲಾಗಿದೆ. ಅವುಗಳನ್ನು ಪೂರ್ಣಗೊಳಿಸಲು ಸರಿಯಾದ ಉತ್ತರವನ್ನು ಗುರುತಿಸಿ ಅದಕ್ಕೆ ಸಂಬಂಧಿಸಿದ ಅಕ್ಷರವನ್ನು ಬಿಟ್ಟಜಾಗದಲ್ಲಿ ಬರೆಯಿರಿ.

8. ಅನಿರ್ವಚನೀಯ ಎಂಬ ಪದದ ಅರ್ಥವನ್ನು ಕಾಣುವ ವಾಕ್ಯ___________

ಎ) ಹಲವಾರು ವರ್ಷಗಳ ನಂತರ ನನ್ನ ಅಧ್ಯಾಪಕರನ್ನು ಭೇಟಿಯಾದಾಗ ನನಗೆ ಅನಿರ್ವಚನೀಯವಾದ ಆನಂದವಾಯಿತು.

ಬಿ) ಮಗುವಿಗೆ ಅಮ್ಮ ತಿಂಡಿ ಕೊಟ್ಟಾಗ ಅನಿರ್ವಚನೀಯವಾದ ಆನಂದವಾಯಿತು

ಸಿ) ಬಸ್ಸಿಗೆ ಕಾಯುತ್ತಿದ್ದ ವ್ಯಕ್ತಿಗೆ ಬಸ್ಸು ಬಂದುದು ನೋಡಿ ಅನಿರ್ವಚನೀಯವಾದ ಆನಂದವಾಯಿತು

9. ಶರಾಯಿ ಎಂಬ ಪದದ ಅರ್ಥ__________

ಎ) ಕೋಟು

ಬಿ) ಷರಟು

ಸಿ) ಪ್ಯಾಂಟು

10 **“**ನನ್ನ ಸಮಾನ ಪಾಠ ಮಾಡುವವರು ಯಾರೂ ಇಲ್ಲವೆಂದು ಪ್ರಶಸ್ತಿಯನ್ನು ಎಲ್ಲರಿಂದಲೂ ಪಡೆದಿದ್ದೇನೆ**”** ಎಂಬಲ್ಲಿ **‘**ಪ್ರಶಸ್ತಿ**’** ಎಂಬ ಪದದ ಅರ್ಥ__________

ಎ) ಪಾರಿತೋಷಕ

ಬಿ) ಬಹುಮಾನ

ಸಿ) ಮೆಚ್ಚುಗೆ

11. .ಇವುಗಳಲ್ಲಿ ಸರಿಯಾದ ರೂಪ__________

ಎ) ಉಪಾಧ್ಯಾಯ

ಬಿ) ಉಪಾದ್ಯಾಯ

ಸಿ) ಉಪಧ್ಯಾಯ

12. ಜನ್ಮ ಜನ್ಮಗಳಲ್ಲಿ ಮಿತ್ರರಾಗಿದ್ದರು ’ಎಂಬಲ್ಲಿ ‘ಜನ್ಮ ಜನ್ಮದಿಂದ’ ಎಂದರೆ__________

ಎ) ವಿವಿಧ ಜನ್ಮಗಳಲ್ಲಿ

ಬಿ) ಕಳೆದ ಜನ್ಮದಲ್ಲಿ

ಸಿ) ಬಹಳ ಕಾಲದಿಂದ

13. ಹದಿನಾರಾಣೆಯ ಮುಸಲ್ಮಾನ ಮೌಲ್ವಿಯಂತೆಯೇ ಕಾಣುತ್ತಿದ್ದ ಎಂಬಲ್ಲಿ 'ಹದಿನಾರಾಣೆ' ಎಂದರೆ__________

ಎ) ಅಪ್ಪಟ

ಬಿ) ಹದಿನಾರು ಕಾಸು

ಸಿ) ಹದಿನಾರುಆಣೆ

14. ಕನ್ನಡದಲ್ಲಿ ಹೆಚ್ಚು ಪುಸ್ತಕ ಓದುತ್ತೀರಾ ಎಂಬ ವಾಕ್ಯದ ಕೊನೆಯಲ್ಲಿ ಬಳಸಬೇಕಾದ ಚಿಹ್ನೆ__________

ಎ) ಪ್ರಶ್ನಾರ್ಥಕ

ಬಿ) ಆಶ್ಚರ್ಯಸೂಚಕ

ಸಿ) ಭಾವಸೂಚಕ

15. ಎದುರಿಗಿರುವವರೆಲ್ಲ ಎಂಬ ಪದವನ್ನು ಬಿಡಿಸಿ ಬರೆದರೆ ಸಿಗುವ ರೂಪ__________

ಎ) ಎದುರಿಗೆ+ಇರುವವರಿಗೆ+ಎಲ್ಲ

ಬಿ) ಎದುರಿಗೆ+ಇರುವವರಿಗೆಲ್ಲ

ಸಿ) ಎದುರಿಗಿ+ರುವವರೆಲ್ಲ

16. 'ಲಕ್ಷ'ಎಂಬ ಪದ__________

ಎ) ಸಂಖ್ಯಾವಾಚಕ

ಬಿ) ಗುಣವಾಚಕ

ಸಿ) ಸರ್ವನಾಮ

17. ನಿಮ್ಮ+ಎದುರು ಎಂಬ ಪದಗಳನ್ನು ಕೂಡಿಸಿ ಬರೆದರೆ ಸಿಗುವ ರೂಪ__________

ಎ) ನಿಮ್ಮಿದುರು

ಬಿ) ನಿಮ್ಮೆದರು

ಸಿ) ನಿಮ್ಮೆದುರು

18. ಕೆಳಗೆ 'ಎ' ಪಟ್ಟಿಯಲ್ಲಿ ತತ್ಸಮಗಳನ್ನೂ 'ಬಿ' ಪಟ್ಟಿಯಲ್ಲಿ ತದ್ಭವಗಳನ್ನೂ ಕೊಡಲಾಗಿದೆ. ಅವುಗಳನ್ನು ಹೊಂದಿಸಿರಿ

| | ತತ್ಸಮ | ತದ್ಭವ | |
|---|---|---|---|
| 1 | ದೃಷ್ಟಿ | ಗಳಿಗೆ | ಎ |
| 2 | ಘಟಿಕಾ | ಹಬ್ಬ | ಬಿ |
| 3 | ಪುಸ್ತಕ | ಜನುಮ | ಸಿ |
| 4 | ಪರ್ವ | ಹೊತ್ತಿಗೆ | ಖ |
| 5 | ಜನ್ಮ | ದಿಟ್ಟಿ | ಇ |

23. ಈ ಗದ್ಯ ಭಾಗದಲ್ಲಿ ನಿಮಗೆ ಇಷ್ಟವಾದ ಅಂಶಗಳನ್ನು ವಿವರಿಸಿ.

24. ಗದ್ಯ ಭಾಗವನ್ನು ಸಂಭಾಷಣೆಯಾಗಿ ಪರಿವರ್ತಿಸಿ.

25. ಆಸಕ್ತಿ, ವ್ಯಾಸಂಗ,  ಸಮ್ಮೇಳನ, ನಂಬಿಕೆ, ಧ್ಯಾನ– ಈ ಪದಗಳನ್ನು ಬಳಸಿ ಅರ್ಥಪೂರ್ಣವಾದ ವಾಕ್ಯಗಳನ್ನು ರಚಿಸಿ.

**ಅಂಕಗಳ ವಿಶ್ಲೇಷಣೆ;**

ಶೇ. 40 ಅಂಕಗಳಿಗಿಂತ ಕಡಿಮೆ ಅಂಕ ಪಡೆದವರು:

ಶೇ. 41 ಮತ್ತು 60ರ ನಡುವೆ ಅಂಕ ಪಡೆದವರು:

ಶೇ. 60ರ ಮೇಲೆ ಅಂಕ ಪಡೆದವರು:

ಫಲಿತಾಂಶಗಳಿಗೆ ಕಾರಣಗಳನ್ನು ಆಲೋಚಿಸಿರಿ:

# ವಸ್ತುನಿಷ್ಠ ಪರೀಕ್ಷಾ ಸಾಮಗ್ರಿ

1. ಈ ಸಾಮಗ್ರಿಯಲ್ಲಿ ಒಳಗೊಳ್ಳುವ ಎಲ್ಲ ಪ್ರಶ್ನೆಗಳೂ ವಸ್ತುನಿಷ್ಠ ಪ್ರಶ್ನೆಗಳೇ ಆಗಿರಬೇಕು. ಅದು ಕೆಳಗೆ ವಿವರಿಸಿರುವ ಐದೂ ವಿಧಗಳನ್ನೂ ಒಳಗೊಂಡಿರಲಿ. ಪ್ರತಿಯೊಂದು ರೀತಿಯ ಪ್ರಶ್ನೆ ಮಾಲಿಕೆಯಲ್ಲಿ ಕೊನೆಯ ಪಕ್ಷ 4 ಪ್ರಶ್ನೆಗಳಿರುವಂತೆ ನೋಡಿಕೊಳ್ಳಿ.
2. ಪ್ರಶ್ನೆಗಳ ವಿಷಯವನ್ನು ನಿರ್ದಿಷ್ಟೀಕರಿಸಿಕೊಳ್ಳಿ. ಇಡೀ ಪಠ್ಯವನ್ನೊಳಗೊಳ್ಳುವುದಕ್ಕಿಂತ ನಿರ್ದಿಷ್ಟ ವಿಷಯ/ಪಾಠಗಳಿಗೆ ಸಂಬಂಧಿಸಿದಂತಿರಲಿ. ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗದ್ಯಪಾಠಗಳು, ಭೂಗೋಳ ಇತ್ಯಾದಿ.
3. ಸೂಚನೆಗಳು ಸ್ಪಷ್ಟವಾಗಿರಲಿ. ಸೂಚನೆಗಳನ್ನು ಎರಡು ಭಾಗಗಳಾಗಿ ವಿಂಗಡಿಸಿಕೊಳ್ಳಿ. ಮೊದಲನೆಯ ಭಾಗದಲ್ಲಿ ಏನು ಕೊಡಲಾಗಿದೆ ಎಂಬುದನ್ನು ಸ್ಪಷ್ಟಪಡಿಸಿ. ಎರಡನೆಯ ಭಾಗದಲ್ಲಿ ವಿದ್ಯಾರ್ಥಿಗಳಿಂದ ಏನನ್ನು ಅಪೇಕ್ಷಿಸಲಾಗಿದೆ ಎಂಬುದನ್ನು ತಿಳಿಸಿ. ಉದಾಹರಣೆಗೆ, ಕೆಳಗೆ ನಾಲ್ಕು ಆಯ್ಕೆಗಳಿರುವ ಹತ್ತು ಪ್ರಶ್ನೆಗಳನ್ನು ಕೊಡಲಾಗಿದೆ. ಈ ಆಯ್ಕೆಗಳಲ್ಲಿ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಕಂಡುಹಿಡಿದು ಉತ್ತರವನ್ನು ಸೂಚಿಸುವ ಅಕ್ಷರವನ್ನು ಬಿಟ್ಟಜಾಗದಲ್ಲಿ ಬರೆಯಿರಿ.
4. ಪ್ರತಿ ಪ್ರಶ್ನೆಗೆ ಉದ್ದೇಶ, ಮತ್ತು ಉತ್ತರಗಳನ್ನು ನಮೂದಿಸಿ.
5. ಒಂದು ಮಾದರಿಯ ಪ್ರಶ್ನೆಗಳನ್ನು ಒಟ್ಟಿಗೇ ಬರೆಯಿರಿ.

## 1. ಪದಪೂರಣ ಪ್ರಶ್ನೆಮಾಲಿಕೆ

**ಸೂಚನೆ:** ಕೆಳಗೆ ಕೆಲವು ಅಸಂಪೂರ್ಣ ವಾಕ್ಯಗಳನ್ನು ಕೊಡಲಾಗಿದೆ. ಅವುಗಳನ್ನು ಸೂಕ್ತ ಪದಗಳಿಂದ ತುಂಬಿ ಪೂರ್ಣಗೊಳಿಸಿ

1. "ಇವತ್ತೇ ಸುದಿನ, ದೇವರದಯೆ ನಾವಿಬ್ಬರೂ ಸೇರಿದೆವು" ಎಂದು ಹೇಳಿದವರು__________(ಉದ್ದೇಶ: ಗ್ರಹಿಕೆ)(ಉತ್ತರ: ಸಾಹೇಬರು)
2. ಸಾಹೇಬರ ಸಹವಾಸದಿಂದ ಪಡೆದ ಆನಂದ ಒಮ್ಮೆಗೇ ಮಾಯವಾಯಿತು ಎಂಬುದನ್ನು ಗದ್ಯಭಾಗದಲ್ಲಿ ಸೂಚಿಸುವ ಮಾತು ------------(ಉದ್ದೇಶ: ಉನ್ನತ ಮಟ್ಟದಗ್ರಹಿಕೆ) (ಉತ್ತರ: ಒಂದು ಸುಗಂಧ ಇದ್ದಕ್ಕಿದ್ದಂತೆ ಮರೆಯಾದಂತೆ ಭಾಸವಾಯಿತು.)

## 2. ಸಂಬಂಧ ಕಲ್ಪಕ ಪ್ರಶ್ನೆಮಾಲಿಕೆ: ಇದನ್ನು ವಿಭಿನ್ನ ರೀತಿಗಳಲ್ಲಿ ಕೇಳಬಹುದು

1. ಸೂಚನೆ: ಮೊದಲ ಗುಂಪಿನಲ್ಲಿ ಎರಡು ಪದಗಳನ್ನು ಕೊಡಲಾಗಿದೆ. ಎರಡನೇ ಗುಂಪಿನಲ್ಲಿ ಒಂದು ಪದವನ್ನು ಕೊಡಲಾಗಿದೆ. ಮೊದಲೆರಡು ಪದಗಳಿಗಿರುವ ಸಂಬಂಧವನ್ನು ಗಮನಿಸಿ, ಮೂರನೇ ಪದಕ್ಕೆ ಸಂಬಂಧಪಟ್ಟ ಪದವನ್ನು ಗುರುತಿಸಿ. ಉದಾಹರಣೆ: ಗರಿಗೆದರು: ಆದೇಶಸಂಧಿ:: ಹಾಗಾದರೆ: __________
   ಭಾರತ: ಪ್ರಜಾಪ್ರಭುತ್ವ:: ಚೀನಾ:

ಆಮ್ಲಜನಕ: ಅನಿಲ:: ಪಾದರಸ:

2. ಕೊಟ್ಟಿರುವ ಪದಗಳಲ್ಲಿ ಹೊಂದದ ಪದವನ್ನು ಗುರುತಿಸಿ. ನೀರಜ, ಕಮಲಜ, ಕಮಲ, ತಾವರೆ

3. 'ಎ' ಪಟ್ಟಿಯಲ್ಲಿ ಪದಗಳನ್ನೂ 'ಬಿ' ಪಟ್ಟಿಯಲ್ಲಿ ಪದಗಳ ಅರ್ಥಗಳನ್ನೂ ಕೊಡಲಾಗಿದೆ. ಪದಗಳಿಗೆ ಸರಿಯಾದ ಅರ್ಥಗಳನ್ನು ಗುರುತಿಸಿ, ಸಂಬಂಧಪಟ್ಟ ಅಕ್ಷರವನ್ನು ಕೊಟ್ಟಿರುವ ಸ್ಥಳದಲ್ಲಿ ಬರೆಯಿರಿ(ಪಟ್ಟಿಯಲ್ಲಿಕೊಡುವ ಪದಗಳು ಒಂದೇ ಗುಂಪಿಗೆ ಸೇರಿರಬೇಕು).

**3.ಬಹು ಉತ್ತರ ಪ್ರಶ್ನೆಮಾಲಿಕೆ** Use Plausible Distractors Use answers given in previous open-ended exams to provide realistic distractors 2 Use a Question Format Use memory-plus application questions Avoid Negative Questions. Keep Option Lengths Similar • Avoid making your correct answer the long or short answer Use Only One Correct Avoid the "All the Above" Option • Students merely need to recognize two correct options to get the answer correct 13. Avoid the "None of the Above"

## 4. ಸರಣಿ ಪ್ರಶ್ನೆಮಾಲಿಕೆ

ಕೆಳಗೆ  ಕೆಲವು ಘಟನೆಗಳನ್ನು ಕೊಡಲಾಗಿದೆ. ಅವುಗಳನ್ನು ಕಾಲಾನುಕ್ರಮವಾಗಿ ಜೋಡಿಸಿ.
ಕೆಳಗೆ ಪ್ರಯೋಗಕ್ಕೆ ಸಂಬಂಧಿಸಿದ ಕೆಲವು ಕಾರ್ಯಗಳನ್ನು ಕೊಡಲಾಗಿದೆ. ಅವುಗಳನ್ನು ಮಾಡಬೇಕಾದ ಸರಣಿಗೆ ಅನುಗುಣವಾಗಿ ಜೋಡಿಸಿ.
ಕೆಳಗೆ ಪಾಠಕ್ಕೆ ಸಂಬಂಧಿಸಿದ ಕೆಲವು ಘಟನೆಗಳನ್ನು ಸೂಚಿಸುವ ವಾಕ್ಯಗಳನ್ನು ಕೊಡಲಾಗಿದೆ. ಅವುಗಳನ್ನು ಪಠ್ಯದಲ್ಲಿ ನಿರೂಪಿಸಿರುವ ಸರಣಿಯಲ್ಲಿ ಜೋಡಿಸಿ.
ಒಂದು ಸಮಾನಾಂತರ ಚತುರ್ಭುಜವನ್ನು ರಚಿಸುವ ವಿಧಾನಕ್ಕೆ ಸಂಬಂಧಿಸಿದ ಸೂಚನೆಗಳನ್ನು ಕೊಡಲಾಗಿದೆ. ಅವುಗಳನ್ನು ರಚನೆಗೆ ಅನುಗುಣವಾದ ಸರಣಿಯಲಿ ಬರೆಯಿರಿ.
ಪ್ರಯೋಗವನ್ನ ಮಾಡಬೇಕಾದ ಸರಣಿಗೆ ಅನುಗುಣವಾಗಿ ಕೆಳಗಿನ ಕಾರ್ಯಗಳನ್ನು ಜೋಡಿಸಿರಿ.
ಅಶೋಕನ ರಾಜ್ಯವಿಸ್ತಾರಕ್ಕೆ ಸಂಬಂಧಿಸಿದ ಘಟನೆಗಳನ್ನು ಕಾಲಾನುಕ್ರಮವಾಗಿ ಜೋಡಿಸಿರಿ.

## 5. ಸರಿ–ತಪ್ಪು ಪ್ರಶ್ನೆಮಾಲಿಕೆ

**ಪಾಠದಲ್ಲಿ ಬಂದಿರುವ ವಿಷಯಗಳಿಗೆ ಸಂಬಂಧಿಸಿದ ಕೆಲವು ಘಟನೆಗಳನ್ನು ಕೊಡಲಾಗಿದೆ. ಅವುಗಳು ಸರಿಯೇ ತಪ್ಪೇ ಎಂಬುದನ್ನು ಗುರುತಿಸಿ ಸರಿಯಿದ್ದರೆ ಚಿಹ್ನೆಯಿಂದಲೂ ತಪ್ಪಾಗಿದ್ದರೆ ಚಿಹ್ನೆಯಿಂದಲೂ ಸೂಚಿಸಿ ತಪ್ಪಾದುದನ್ನು ಸರಿಪಡಿಸಿ.**